# ಕರ್ನಾಟಕ ವಿಧಾನ ಪರಿಷತ್ತು

| | |
|---|---|
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | 124 |
| ಸದಸ್ಯರ ಹೆಸರು | ಶ್ರೀ ಡಿ.ಎಸ್.ಅರುಣ್ |
| ಉತ್ತರಿಸುವ ದಿನಾಂಕ | 05-03-2025 |
| ಉತ್ತರಿಸುವವರು | ಸಾರಿಗೆ ಮತ್ತು ಧಾರ್ಮಿಕ ದತ್ತಿ ಸಚಿವರು |

| ಕ್ರ. ಸಂ. | ಪ್ರಶ್ನೆ | ಉತ್ತರ |
|---|---|---|
| ಅ) | ಕೈಲಾಸ ಮಾನಸ ಸರೋವರ ಯಾತ್ರೆಗೆ 2023-24ರ ಸಾಲಿನಲ್ಲಿ ಎಷ್ಟು ಅನುದಾನ ನಿಗದಿಪಡಿಸಲಾಗಿತ್ತು ಹಾಗೂ ಬಳಕೆ ಮಾಡಿರುವ ಅನುದಾನವೆಷ್ಟು; (ವಿವರ ಒದಗಿಸುವುದು) | 2023-24ನೇ ಸಾಲಿನಲ್ಲಿ ಲೆಕ್ಕ ಶೀರ್ಷಿಕೆ: "2250-00-103-5-08-(100) ಇದರಡಿ ಕರ್ನಾಟಕ ರಾಜ್ಯದಿಂದ ಕೈಲಾಸ ಮಾನಸ ಸರೋವರ ಯಾತ್ರೆ, ಚಾರ್‌ಧಾಮ್ ಯಾತ್ರೆ, ಕಾಶಿ ಯಾತ್ರೆ ಹಾಗೂ ಭಾರತ್ ಗೌರವ್ ಕಾಶಿ-ಗಯಾ ದರ್ಶನ ಯೋಜನೆಯಡಿ ಪ್ರಯಾಣಿಸುವ ಯಾತ್ರಾರ್ಥಿಗಳಿಗೆ ಒಟ್ಟಾಗಿ ರೂ.2000.00 ಲಕ್ಷಗಳ ಅನುದಾನವನ್ನು ಸರ್ಕಾರವು ಮಂಜೂರು ಮಾಡಿರುತ್ತದೆ.<br><br>2023-24ನೇ ಸಾಲಿಗೆ ಸರ್ಕಾರದಿಂದ ಮಂಜೂರಾದ ಅನುದಾನದಲ್ಲಿ ಬಳಕೆ ಮಾಡಿರುವ ಅನುದಾನದ ವಿವರಗಳು ಈ ಕೆಳಕಂಡಂತಿದೆ:- |

| ಕ್ರ.ಸಂ. | ಯೋಜನೆಯ ವಿವಿರ | ಬಳಕೆ ಮಾಡಿದ ಅನುದಾನ |
|---|---|---|
| 1 | ಮಾನಸ ಸರೋವರ | - |
| 2 | ಚಾರ್ ಧಾಮ್ | 4,49,40,000.00 |
| 3 | ಕಾಶಿ ಯಾತ್ರೆ | 57,95,000.00 |
| 4 | ಭಾರತ್ ಗೌರವ್ ಯೋಜನೆ | 9,04,34,000.0 |
| | **ಒಟ್ಟು** | **14,11,69,000.00** |

| ಕ್ರ. ಸಂ. | ಪ್ರಶ್ನೆ | ಉತ್ತರ |
|---|---|---|
| ಆ) | ಚಾರ್ ಧಾಮ್ ಯಾತ್ರೆಗೆ 2023-24ರಲ್ಲಿ ಎಷ್ಟು ಅನುದಾನ ನೀಡಲಾಗಿದೆ; | ಕರ್ನಾಟಕ ರಾಜ್ಯದಿಂದ ಕೈಲಾಸ ಮಾನಸ ಸರೋವರ ಯಾತ್ರೆ, ಚಾರ್‌ಧಾಮ್ ಯಾತ್ರೆ, ಕಾಶಿಯಾತ್ರೆ ಹಾಗೂ ಭಾರತ್ ಗೌರವ್ ಕಾಶಿ-ಗಯಾ ದರ್ಶನ ಯೋಜನೆಯಡಿ ಪ್ರಯಾಣಿಸುವ ಯಾತ್ರಾರ್ಥಿಗಳಿಗೆ ಒಟ್ಟಾರೆಯಾಗಿ ರೂ.2000.00 ಲಕ್ಷಗಳ ಅನುದಾನವನ್ನು ಸರ್ಕಾರವು 2023-24ನೇ ಸಾಲಿನಲ್ಲಿ ಲೆಕ್ಕ ಶೀರ್ಷಿಕೆ: "2250-00-103-5-08-(100) ರಡಿ ಮಂಜೂರು ಮಾಡಿದ್ದು, ಸದರಿ ಸಾಲಿನಲ್ಲಿ ಕರ್ನಾಟಕ ರಾಜ್ಯದಿಂದ ಚಾರ್ ಧಾಮ್ ಯಾತ್ರೆ ಕೈಗೊಂಡ 2247 ಅರ್ಹ ಯಾತ್ರಾರ್ಥಿಗಳಿಗೆ ತಲಾ ರೂ.20,000/-ಗಳಂತೆ ಒಟ್ಟು ರೂ.4,49,40,000/-ಗಳ ಸರ್ಕಾರದ ಸಹಾಯಧನವನ್ನು ವಿತರಿಸಲಾಗಿರುತ್ತದೆ. |

| ಕ್ರ. ಸಂ. | ಪ್ರಶ್ನೆ | ಉತ್ತರ |
|---|---|---|
| ಇ) | ಆರಾಧನ ಯೋಜನೆಗೆ 2023-24 ರವರೆಗೂ ನಿಗದಿಪಡಿಸಲಾಗಿರುವ ಮೊತ್ತವೆಷ್ಟು ಹಾಗೂ ಬಳಕೆ ಮಾಡಿರುವ ಮೊತ್ತವೆಷ್ಟು? (ಮಾಹಿತಿ ಒದಗಿಸುವುದು). | ಆರಾಧನ ಯೋಜನೆಗೆ 2023-24 ರಲ್ಲಿ ರೂ.500.00 ಲಕ್ಷಗಳ ಅನುದಾನವನ್ನು ನಿಗದಿಪಡಿಸಲಾಗಿದ್ದು, ಪ್ರತಿ ವಿಧಾನ ಸಭಾ ಕ್ಷೇತ್ರಕ್ಕೆ ರೂ.2.23 ಲಕ್ಷಗಳಂತೆ ಅನುದಾನ ಹಂಚಿಕೆ ಮಾಡಲಾಗಿರುತ್ತದೆ.<br><br>2023-24ನೇ ಸಾಲಿನ ವರ್ಷಾಂತ್ಯಕ್ಕೆ ಖಜಾನೆ-2 ರಡಿ ರೂ.496.44 ಲಕ್ಷಗಳ (ಶೇ.99.28 ರಷ್ಟು) ವೆಚ್ಚ ಮಾಡಲಾಗಿದ್ದು, ಯೋಜನೆಯ ಮಾರ್ಗಸೂಚಿ ಯನ್ವಯ ಆಯಾಯ ಕ್ಷೇತ್ರದ ವಿಧಾನಸಭಾ ಸದಸ್ಯರ ಅಧ್ಯಕ್ಷತೆಯಲ್ಲಿರುವ ಆರಾಧನಾ ಸಮಿತಿಯ ಅನುಮೋದನೆಯಂತೆ ಅರ್ಹ ದೇವಾಲಯದ ಕಾಮಗಾರಿಗಳಿಗಾಗಿ ಬಳಕೆ ಮಾಡಿಕೊಳ್ಳಲಾಗುತ್ತಿದೆ. |

ಕಂಇ 17 ಮುಸಪು 2025

(ರಾಮಲಿಂಗಾರೆಡ್ಡಿ)

ಸಾರಿಗೆ ಮತ್ತು ಧಾರ್ಮಿಕ ದತ್ತಿ ಸಚಿವರು